**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿ.ಸಿ. ಸಂಖ್ಯೆ 69/2018**

ಚಾಸಾ–7, ಫ್ರಾಸಾ–5

| | | |
|---|---|---|
| ಹೆಸರು | : | ಆನಂದ ಎನ್ |
| ಗಂಡನ ಹೆಸರು | : | ಲೇಟ್ ನಾಗರಾಜ್ ನಾಯಕ |
| ವಯಸ್ಸು | : | 43 |
| ವೃತ್ತಿ | : | ಪೊಲೀಸ್ ನಿರೀಕ್ಷಕರು, ಚಿಕ್ಕಜಾಲ ಪೊಲೀಸ್ ಠಾಣೆ, ಬೆಂಗಳೂರು |
| ವಾಸ | : | ಬೆಂಗಳೂರು |

**<u>ದಿನಾಂಕ 20.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ : ಸ್ವಯಂ</u>**

ದಿನಾಂಕ 26.12.2016 ರಿಂದ 05.08.2018 ರವರೆಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 06.05.2017 ರಂದು ಮಧ್ಯಾಹ್ನ 1.00 ಗಂಟೆಗೆ ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಫ್ರಾಸಾ–1 ರವರು ನೀಡಿದ ದೂರನ್ನು ಸ್ವೀಕರಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.1 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ನಂತರ ಸದರಿ ದೂರಿನ ಮೇಲೆ ಅಪರಾಧ ಸಂಖ್ಯೆ 168/2017 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದನ್ನು ನ್ಯಾಯಾಲಯಕ್ಕೆ ಮತ್ತು

ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.8 ಮತ್ತು 8(ಎ) ಎಂದು ಗುರುತಿಸಲಾಯಿತು.

ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಫ್ರಾಸಾ-1 ರವರು ತೋರಿಸಿದಂತೆ ಫ್ರಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮವನ್ನು ಮಧ್ಯಾಹ್ನ 3.00 ರಿಂದ 3.45 ಗಂಟೆ ಸಮಯದಲ್ಲಿ ಜರುಗಿಸಿ ಫ್ರಾಸಾ-1 ರವರು ಹಾಜರುಪಡಿಸಿದ 3 ಅಡಿ ಉದ್ದದ ದೊಣ್ಣೆಯನ್ನು ಜಪ್ತಿಪಡಿಸಲಾಯಿತು. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.4 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು. ಸದರಿ ದೊಣ್ಣೆಯನ್ನು ಈಗ ನೋಡಿ ಗುರುತಿಸಿದ್ದು, ಅದನ್ನು ಈಗ ಎಂಒ.1 ಎಂದು ಗುರುತಿಸಲಾಯಿತು.

ಸದರಿ ದೊಣ್ಣೆಯನ್ನು ಸ್ವತ್ತಿನ ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಅದೇ ದಿನ ಫ್ರಾಸಾ-1 ರವರ ಮರುಹೇಳಿಕೆ, ಚಾಸಾ-2, 3, ಫ್ರಾಸಾ-2, 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಫ್ರಾಸಾ-2 ಮತ್ತು 3 ರವರ ಹೇಳಿಕೆಗಳಲ್ಲಿರುವ ನನ್ನ ಸಹಿಗಳನ್ನು ಈಗ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು.

ಫ್ರಾಸಾ-1 ರವರ ಹೇಳಿಕೆಯನ್ನು ನ್ಯಾಯಾಲಯದಲ್ಲಿ ದಾಖಲಿಸುವಂತೆ ನ್ಯಾಯಾಲಯಕ್ಕೆ ಕೋರಿ ಕೊಂಡಿದ್ದು, ದಿನಾಂಕ 03.06.2017 ರಂದು ಅವರ ಹೇಳಿಕೆಯನ್ನು ನ್ಯಾಯಾಲಯವು ಪಡೆದುಕೊಂಡಿದ್ದು, ಅದರ ಪ್ರತಿಯನ್ನು ನ್ಯಾಯಾಲಯದಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ನೋಡಿದ್ದು, ಅದು ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದೆ.

ದಿನಾಂಕ 01.10.2017 ರಂದು ಫ್ರಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಫ್ರಾಸಾ-4 ರವರಿಂದ ಪಡೆದುಕೊಂಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.7 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಬಿ) ಎಂದು ಗುರುತಿಸಲಾಯಿತು.

ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲು : ಶ್ರೀ ಎನ್.ಎಸ್. ಆರೋಪಿತರ ಪರ ವಕೀಲರಿಂದ:**

ನಾನು ಆಸ್ಪತ್ರೆಗೆ ಹೋಗುವ ಪೂರ್ವದಲ್ಲಿ ಆಸ್ಪತ್ರೆಯಿಂದ ಎಂ ಎಲ್ ಸಿ ಬಂದಿತ್ತು. ಆ ಬಗ್ಗೆ ನಮ್ಮ ತನಿಖಾ ಪ್ರಕರಣದ ವರದಿಯಲ್ಲಿ ನಮೂದು ಮಾಡಲಾಗಿದೆ. ನಿಪಿ.8 ರಲ್ಲಿ ವರ್ತಮಾನವು ಠಾಣೆಯಲ್ಲಿ ಸ್ವೀಕರಿಸಲಾಗಿದೆ ಎಂದು

ನಮೂದು ಇದೆ ಎಂದರೆ ಸರಿ. ಘಟನೆಯ ವರ್ತಮಾನವು ಎಂ ಎಲ್ ಸಿ ಯ ಮೂಲಕ ನನಗೆ ಬಂದಾಗ ಮಧ್ಯಾಹ್ನ 12.55 ಗಂಟೆಯಾಗಿತ್ತು. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಹೋದಾಗ ಗಾಯಾಳು ಚಿಕಿತ್ಸೆಯಲ್ಲಿದ್ದರು. ಅವರು ದೂರನ್ನು ನಾನು ಹೋಗುವ ಪೂರ್ವದಲ್ಲಿ ಸಿದ್ಧಪಡಿಸಿದ್ದರು. ಅವರು ಸಲ್ಲಿಸಿದ ಸುಳ್ಳು ದೂರಿಗೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಪಂಚನಾಮದ ವೇಳೆಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿರುವ ಬೋರ್‌ವೆಲ್ ಯಾವ ಜಮೀನಿನ ಸರ್ವೆ ನಂಬರಿನಲ್ಲಿದೆ ಎಂದು ಕಂಡು ಬಂತಾ ಎಂದರೆ ಜಮೀನು ಎಂದು ನಮೂದಿಸಿದ್ದು, ಅದು ಯಾವ ಸರ್ವೆ ನಂಬರ್ ಎಂದು ನಮೂದಿಸಿರುವುದಿಲ್ಲ. ಆ ಯೋಜನೆಗೆ ಯಾರು ಯಾರು ಫಲಾನುಭವಿಗಳು ಎಂದು ನನಗೆ ಗೊತ್ತಿಲ್ಲ.

ನಾನು ಸ್ಥಳಕ್ಕೆ ಹೋಗಿರದೆ ಪಂಚನಾಮವನ್ನು ಠಾಣೆಯಲ್ಲಿ ಸಿದ್ಧಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ, ಯಾವುದೇ ದೊಣ್ಣೆಯನ್ನು ಜಪ್ತಿಪಡಿಸಿಲ್ಲ ಮತ್ತು ಯಾವುದೇ ದಾಖಲೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಫ್ರಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**